**ಪ್ರಮಾಣೀಕರಿಸಲಾದ ದಿನಾಂಕ: 30.08.2025.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. S.S ವಕೀಲರಿಂದ :-**

ಈ ದಾವೆಯನ್ನು ಯಾರು ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ಈ ದಾವೆಯನ್ನು ಕೃಷ್ಣರವರು ದಾಖಲಿಸಿದ್ದು ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ವಾದಿಯು 30 X 40 ವಿಸ್ತೀರ್ಣದ ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತಾರೆ. ದಾವಾ ಆಸ್ತಿ ಒಂದು ವಾಸದ ಮನೆಯಾಗಿರುತ್ತದೆ. ದಾವಾ ಆಸ್ತಿಯಲ್ಲಿ ವಾದಿ ಹಾಗೂ ಆತನ ಕುಟುಂಬದವರು ವಾಸವಿದ್ದಾರೆ. ವಾದಿಯು ನನಗೆ ಬಾಲ್ಯದಿಂದಲೂ ಪರಿಚಯವಿರುತ್ತಾರೆ. ವಾದಿಯು ಪತ್ರಕರ್ತ ಆಗಿರುತ್ತಾನೆ. ದಾವಾ ಆಸ್ತಿಯ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ವಾದಿಗೆ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಪರಿಚಯ ನನಗೆ ಇಲ್ಲ. ಅವರು ವಾದಿಯ ಮನೆಯ ಪೂರ್ವದಲ್ಲಿ ಇದ್ದಾರೆ. ಸದರಿ ಮನೆಯಲ್ಲಿ ಜಯಮ್ಮ ಹಾಗೂ ಆಕೆಯ 5 ಜನ ಮಕ್ಕಳು ವಾಸವಿದ್ದಾರೆ. 1ನೇ ಪ್ರತಿವಾದಿಯ ಮನೆಯ ಪೂರ್ವಕ್ಕೆ ಆಕೆಯ ಮಗಳ ಮನೆ ಇದೆ. ಸದರಿ ಮನೆಯು 2 ಭಾಗವಿದ್ದು ಒಂದು ಭಾಗದಲ್ಲಿ 1ನೇ ಪ್ರತಿವಾದಿ ಹಾಗೂ ಮತ್ತೊಂದು ಭಾಗದಲ್ಲಿ ಆಕೆಯ ಮಗಳು ವಾಸವಿದ್ದಾಳೆ ಎಂದರೆ ಸರಿ. 1ನೇ ಪ್ರತಿವಾದಿಗೆ ಸದರಿ ಮನೆಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. 1ನೇ ಪ್ರತಿವಾದಿಯು ಕೂಲಿ ಮಾಡಿ ಜೀವನ ನಡೆಸುತ್ತಿದ್ದು ಆಕೆಯು ಈಗ ಕಾಲು

ಮುರಿದುಕೊಂಡು ಹಾಸಿಗೆ ಹಿಡಿದಿದ್ದಾರೆ ಎಂದರೆ ಸರಿ.

1ನೇ ಪ್ರತಿವಾದಿಯ ಮನೆ ಉತ್ತರದ ಬಾಗಿಲು ಎಂದರೆ ಸರಿ. ಸದರಿ ಮನೆಯ ದಕ್ಷಿಣ ಭಾಗದಲ್ಲಿ 1ನೇ ಪ್ರತಿವಾದಿಯ ಮಗಳು ವಾಸವಿದ್ದಾಳೆ ಎಂದರೆ ಸರಿ. ಸದರಿ ಮನೆಯ ಹಿಂದುಗಡೆ ವಾಸವಿರುವ 1ನೇ ಪ್ರತಿವಾದಿಯ ಮಗಳಿಗೆ 4 ಜನ ಮಕ್ಕಳು, 2 ಹೆಣ್ಣು, 2 ಗಂಡು ಮಕ್ಕಳಾಗಿರುತ್ತಾರೆ. ಸದರಿ ಮನೆಯಲ್ಲಿ ಅವರೊಂದಿಗೆ ಒಟ್ಟು 7 ಜನ ವಾಸವಿರುತ್ತಾರೆ. ಸದರಿ ಹಿಂಭಾಗದಲ್ಲಿರುವ ಮನೆಯ ಪಶ್ಚಿಮ ದಿಕ್ಕಿಗೆ ಒಂದು ಬಚ್ಚಲು ಮನೆ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ 1ನೇ ಪ್ರತಿವಾದಿಯ ಮಗಳಾದ ಶಾರದ ದಕ್ಷಿಣ ದಿಕ್ಕಿನಲ್ಲಿರುವ ತನ್ನ ಮನೆಗೆ ಹೋಗಲು ವಾದಿ ಹಾಗೂ 1ನೇ ಪ್ರತಿವಾದಿಯ ಮನೆಯ ನಡುವೆ ಇರುವಂತಹ ರಸ್ತೆಯಿಂದಲೇ ಹೋಗಬೇಕಾಗುತ್ತದೆ ಎಂದರೆ ಸರಿ. ಸದರಿ ದಾರಿಯು 13 ಅಡಿ ಅಗಲ ಇದೆ. ವಾದಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಮತ್ತೊಂದು ಮನೆ ಇದೆ. 2 ಮನೆಯು ಆತನಿಗೆ ಮುನಿಸಿಪಾಲಿಟಿಯಿಂದ ಕೊಡಲಾಗಿದೆ ಎಂದರೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತಹ ಸಂಗತಿಗಳನ್ನು ವಾದಿ ಹೇಳಿ ಬರೆಸಿರುತ್ತಾರೆ. ಅದರ ಬಗ್ಗೆ ನನಗೆ ಖುದ್ದಾಗಿ ಯಾವುದೇ ಮಾಹಿತಿ ಇಲ್ಲ. ಸದರಿ ಅಳತೆ ಬಗ್ಗೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯ ಮನೆಯ ಉತ್ತರ ದಿಕ್ಕಿನಲ್ಲಿ ಪೂರ್ವ-ಪಶ್ಚಿಮವಾಗಿ ರಸ್ತೆ ಇದೆ ಎಂದರೆ ಸರಿ. ವಾದಿಯ ಮನೆಯ ಪಶ್ಚಿಮಕ್ಕೆ ನಾಗರಾಜುರವರ ಮನೆ ಇದೆ.

ದಾವಾ ಆಸ್ತಿಯಲ್ಲಿ ವಾದಿಗೆ ಸೇರಿದ ಒಂದೇ ಮನೆ ಇದೆ. ದಾವಾ ಆಸ್ತಿಯಲ್ಲಿ ಸಾಕಮ್ಮ ಮತ್ತು ಕಾಂತಮ್ಮನವರ ಮನೆ ಇದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ನಾಗರಾಜುರವರ ಮನೆ ಇದೆ. ಕೃಷ್ಣನ ತಾಯಿ ಸೀತಾಬಾಯಿ. ಸೀತಾಬಾಯಿ ಕೃಷ್ಣನ 2ನೇ ತಾಯಿಯಾಗಿರುತ್ತಾರೆ. ವಾದಿಯು ತಿಪಟೂರಿನಲ್ಲಿ ಮುನಿಸಿಪಾಲಿಟಿಯಿಂದ ಒಟ್ಟು 6 ಮನೆ ಮಂಜೂರು ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ನಾನು ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ದಾವಾ ಆಸ್ತಿ ಮನೆ ಬಿದ್ದು ಹೋಗಿರುತ್ತದೆ. ವಾದಿಯು ಸಣ್ಣ ವಯಸ್ಸಿನಲ್ಲಿ ದಾವಾ ಆಸ್ತಿ ಮನೆಯಲ್ಲಿ ವಾಸವಿದ್ದು ಅದು ಈಗ ಬಿದ್ದು ಹೋಗಿರುತ್ತದೆ. ವಾದಿಯು ಮನೆಯನ್ನು ಕಟ್ಟಲು ಯಾವಾಗ ಪರವಾನಗಿಯನ್ನು ಪಡೆದಿರುತ್ತಾರೆ ಎಂದು ಗೊತ್ತಿಲ್ಲ. ಆದರೆ ಸದರಿ ಪರವಾನಗಿಯನ್ನು 30 X 40 ಅಡಿ ವಿಸ್ತೀರ್ಣದ ಜಮೀನಿನಲ್ಲಿ ಕಟ್ಟಲು ಪಡೆದುಕೊಂಡಿರುತ್ತಾರೆ. ಸದರಿ ಜಮೀನಿನಲ್ಲಿ ಅರ್ಧ ಮನೆಯನ್ನು ಕಟ್ಟಿಕೊಂಡು ಅರ್ಧ ಖಾಲಿ ಬಿಟ್ಟಿರುತ್ತಾರೆ. ಇದರ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದು ಆಗಿರುವುದಿಲ್ಲ.

1ನೇ ಪ್ರತಿವಾದಿಯು ಮನೆಯನ್ನು ಕಟ್ಟಿ ಸುಮಾರು 30 ರಿಂದ 40 ವರ್ಷ ಆಗಿರುತ್ತದೆ. ವಾದಿಯು ಮನೆಯನ್ನು ಕಟ್ಟಿ ಸುಮಾರು 30 ವರ್ಷ ಆಗಿರುತ್ತದೆ. ಈ ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**